ಆಸ್ಪತ್ರೆಯ ಹಿಂದಿನ ಹಳೆಯ ನೇರಳೆ ಮರಕ್ಕೆ ಗಿಳಿಗಳ ಪರಿವಾರ ಆಟವಾಡುವ ಮಕ್ಕಳಂತೆ ಗದ್ದಲ ಮಾಡುತ್ತಿರುವಾಗ ಪುಟ್ಟತ್ತೆ ಕೆಳಗೆ ಹೋಗಿ ನಿಲ್ಲುವಳು. ಬಾರಲೆ ಹಕ್ಕಿ ಎಂದು ನರ್ತಿಸುವಳು. ದೇವಕಿಯ ಸಮಕ್ಷಮ ಗಂಭೀರಳಾಗುತ್ತಿದ್ದಳು. "ಅಬೆ ಹಾಂಗೆ ಎಂತಕ್ಕೆ ಮಾಡ್ತ್ಯೆ?" ದೇವಕಿ ಕೇಳಿದರೆ "ಆನು ಎಂತ ಮಾಡ್ದೆ" ಎಂದು ಮರು ಪ್ರಶ್ನಿಸುವಳು. "ಎನ್ನ ಗಿಣಿ ಸಂಪದಾ. ಅಜ್ಜಿ ನೋಡಲೆ ಬಂದೇ ಬತ್ತು. ಎನ್ನ ಪಾಲಿನ ಜಮೀನು, ಅದ್ರ ತಾಗಿದ್ದ ಸೊಪ್ಪಿನ ಬೆಟ್ಟ ಗಿಳಿಕೂಸಿನ ಹೆಸ್ರಿಗೆ ಬರೀತೆ" ಎನ್ನುವಳು. ದೇವಕಿಗೆ ವಿಪರೀತ ಭಯವಾಯಿತು. ಮರುದಿನವೇ ಪುಟ್ಟತ್ತೆಯನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಿದರು.

ಇತ್ತ ಹರಿಗದ್ದೆಯಲ್ಲಿ ಮಾಲತಿ ಒಂಟಿಯಾಗಿ ರಾತ್ರಿ ಯಾವ ಭಯವೂ ಇಲ್ಲದೆ ಒಂದು ವಾರ ಕಳೆದಳು. ತನಗೆ ಬೇಕಾದ ಹಾಗೆ ಇರಬಹುದು; ಯಾರನ್ನೂ ಕಾಯಬೇಕಿಲ್ಲ; ಕಾಲವನ್ನೂ! ಉಣ್ಣಲು, ಮಲಗಲು ಪರರ ಹಂಗಿಲ್ಲ; ಏಕಾಂತದಲ್ಲಿ ದೊರೆಯುವ ಸ್ವಾತಂತ್ರ್ಯದ ವಿಲಕ್ಷಣ ಆನಂದವನ್ನು ಸವಿದಳು. ತನ್ನದೆಂಬ ಆಪ್ತ ಜಾಗದ ಘನ ಒಡನಾಟದಲ್ಲಿ ಬೇಸರ ಸನಿಹ ಸುಳಿಯದು; ಒರತೆ ಚಿಮ್ಮಿದಂತೆ ಉತ್ಸಾಹ ಉಕ್ಕಿತು; ಅನೇಕ ದಿನಗಳ ನಂತರ ಮಾತಾಡುವ ಆಸೆ ಆಯಿತು. ಹೊಟ್ಟೆಯಲ್ಲಿ ಹಸಿವು, ಕಣ್ತುಂಬ ನಿದ್ರೆ; ಕನಸೊಂದಿದ್ದರೆ ಮರಳಿ ಪ್ರಾಯ ಬಂದಂತೆ ಜೀವ ಉಲ್ಲಾಸದಲ್ಲಿ ಕುಣಿಯುತ್ತದೆ; ಹೆಬ್ಬಾಗಿಲ ಮೇಲೆ ಮುಗ್ಧನಗುತ್ತಿರುವ ತಿರುಮಲನ ಚಿತ್ರ ನೋಡುತ್ತ ಮಾಲತಿ, 'ಆನು ಓಡಿ ಹೋಗ್ನಿಲ್ಲೆ; ಈ ಜಾಗದಲ್ಲಿ ಗಂಜಿ ಉಂಡ್ರೂ ಮೃಷ್ಟಾನಕ್ಕೆ ಸಮ; ನಿಂಗ್ಳ ಮಾತ ನಡೆಸಲಾದಿಲ್ಲೆ, ಆದರೆ ನಿಂಗ್ಳ ಕನ್ಸಾ ಖರೇ ಮಾಡ್ತೆ' ಎಂದು ಸ್ವಗತ ನುಡಿದಳು. ತಿರುಮಲ ತೀರಿದ ನಂತರ ಮಾಲತಿ ಆಡಿದ ದಿಟವಾದ ನಿರಾಳ ಮಾತು ಅದಾಗಿತ್ತು.

ಮಂಚಿಕೇರಿಯ ರಸ್ತೆಗೆ ಸೇರುವ ಹರಿಗದ್ದೆಯ ಕವಲಲ್ಲಿ 'ಹರಿಗದ್ದೆ ಜಮೀನು ಮಾರಾಟಕ್ಕಿಲ್ಲ' ಎಂದು ಬರೆದ ಫಲಕವನ್ನು ಮಾಲತಿ ಮರಕ್ಕೆ ಆನಿಸಿಟ್ಟಳು. ಫಲಕವನ್ನು ವಾಯುವಿಹಾರಕ್ಕೆ ಬಂದು ಹೋಗುವ ಪೇಟೆಯ ಜನ ಒಂದು ಕ್ಷಣ ನಿಂತು ಓದಿ ಮುಂದೆ ಹೋಗತೊಡಗಿದರು.

## ಶ್ರೀಧರ ಬಳಗಾರ

ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದ ಬಳಗಾರ ಶ್ರೀಧರ ಅವರ ಹುಟ್ಟೂರು. ಕುಮಟೆಯ ಕಮಲಾ ಬಾಳಿಗ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ತಮ್ಮ ವಿಶಿಷ್ಟ ಕಥಾಹಂದರ ಹೊಂದಿರುವ ಕಥೆ–ಕಾದಂಬರಿಗಳ ಮೂಲಕ ಓದುಗರಿಗೆ ಪರಿಚಿತರು.

'ಅಧೋಮುಖ', 'ಮುಖಾಂತರ', 'ಇಳೆ ಎಂಬ ಕನಸು', 'ಒಂದು ಫೋಟೊದ ನೆಗೆಟಿವ್', 'ಅಮೃತಪಡಿ' ಅವರ ಕತಾ ಸಂಕಲನಗಳು. 'ಕೇತಕಿಯ ಬನ' ಹಾಗೂ 'ಆಡುಕಳ' ಅವರ ಕಾದಂಬರಿಗಳು. 'ರಥ ಬೀದಿ', 'ಕಾಲ ಪಲ್ಲಟ' ಅವರ ಅಂಕಣ ಬರಹಗಳ ಪುಸ್ತಕಗಳಾಗಿವೆ.